ಶ್ರೀ ಬಿ. ಹುಚ್ಚೇಗೌಡ.—ತುಮಕೂರು ಜಿಲ್ಲೆಯಲ್ಲಿ ಈ ವರ್ಷ ಒಂದೇ ಒಂದು ಗ್ರಾಮಕ್ಕೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೀರಿ, ಈ ರೀತಿಯಾಗಿ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಯಾವ ಕಾಲಕ್ಕೆ ಕೊಡುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜನಗಳು ಮುಂದೆ ಬಾರದೆ ಹೋದರೆ ಸರ್ಕಾರದವರು ನೇರವಾಗಿ ತೆಗೆದು ಕೊಂಡು ಹೋಗಿ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ನಾವೆಲ್ಲ ಸಾಕಾದಷ್ಟು ಮುಂದೆ ಬಂದಿದ್ದೇವೆ. ಉದಾಹರಣೆಗೆ ಜೊಬ್ಬ ಘಟ್ಟದಲ್ಲಿ ಇಷ್ಟು ದೀಪ ತೆಗೆದುಕೊಳ್ಳುತ್ತೇವೆ, ಇಷ್ಟು ಪಂಪ್ ಸೆಟ್ಸ್ ತೆಗೆದುಕೊಳ್ಳುತ್ತೇವೆಂದು ಡಿಪಾಜಿಟ್ ಕೊಟ್ಟಿದ್ದರೂ ಇನ್ನೂ ವಿದ್ಯುಚ್ಛಕ್ತಿಯನ್ನು ಕೊಡದೆ ಇರಲು ಕಾರಣವೇನು?

Sri H. M. CHANNABASAPPA.—Sir, I have made a statement on this subject. If permitted, I would like to reiterate what I said on previous occasions. Wherever people come forward to take electricity agreeing to the conditions as laid down by the Rules and procedure, Government will be very happy to concede their requests.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ ಒಂದು ಗ್ರಾಮಸ್ಥರು ಮಾತ್ರ ವಿದ್ಯುಚ್ಛಕ್ತಿ ಬೇಕೆಂದು ಮುಂದೆ ಬಂದಿದ್ದಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮುಂದೆ ಬಂದವರು ಬೇಕಾದಷ್ಟು ಗ್ರಾಮಗಳವರಿರಬಹುದು. ಆದರೆ ಅದರ ಅರ್ಹತೆಯನ್ನು ಪಡೆದವರು ಅವರೊಬ್ಬರೇ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅರ್ಹತೆಯನ್ನು ಗ್ರಾಮಸ್ಥರು ಪಡೆಯಬೇಕೋ, ಅಥವಾ ಸರ್ಕಾರದವರು ಕೊಡಬೇಕೋ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜನರು ತಮಗೆ ಅರ್ಹತೆ ಇದೆಯೆಂದು ತೋರಿಸಿಕೊಳ್ಳುವುದಕ್ಕೆ ಪ್ರೊಸೀಜರ್, ಕಾನೂನು, ವಿಧಿನಿಯಮಗಳ ಪ್ರಕಾರ ಅರ್ಜಿ ಹಾಕಿಕೊಂಡು ಅದಕ್ಕೆ ಅಗತ್ಯವಾದ ಬಾಂಡು ವಗೈರೆ ಬರೆದುಕೊಡಬೇಕು. ಕಾನೂನು ಪ್ರಕಾರ ತೃಪ್ತಿಕರವಾಗಿದ್ದರೆ ಕೊಡುವುದಕ್ಕೆ ಅಭ್ಯಂತರವಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇದಕ್ಕೆ ದಾರಿ ತೋರಿಸಿಕೊಡುವವರು ಇಲಾಖೆಯವರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲಾಖೆಯವರು ವಿಧಿನಿಯಮಗಳನ್ನು ಪ್ರಚುರಮಾಡುತ್ತಾರೆ. ಅದನ್ನು ನೋಡಿಕೊಂಡು ಹೋಗುವುದು ಜನರ ಕರ್ತವ್ಯ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅದರಂತೆ ಇಲಾಖೆಯವರು ಮಾಡಿಲ್ಲವೆಂದು ಹೇಳುತ್ತಿದ್ದೇನೆ. ಅದು ನಿಜವಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೂಲ್ಸ್, ವಿಧಿನಿಯಮಗಳು ಎಲ್ಲರಿಗೂ ಗೊತ್ತಾಗುವಂತೆ ಪೆಟ್ಟಿನಲ್ಲಿ ಪಬ್ಲಿಕೇಷ್ ಆಗುತ್ತದೆ. Detailed information ಬೇಕಾದಲ್ಲಿ ಒಂದು booklet ಪ್ರಿಂಟ್‌ಮಾಡಿ ನಾಳೆ ಅಥವಾ ನಾಳಿದ್ದು ತಮ್ಮ ಮುಂದಿಡುತ್ತೇನೆ. ಅವುಗಳನ್ನು ದೇಶಾದ್ಯಂತ ಪ್ರಚುರಪಡಿಸಬಹುದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಗೆ ಅನ್ಯಾಯಮಾಡುತ್ತಿದ್ದೀರಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನ್ಯಾಯವನ್ನೇ ದೊರಕಿಸಿಕೊಡುತ್ತಿದ್ದೇವೆ.

ಶ್ರೀ ವಿ. ವೆಂಕಟಪ್ಪ.—ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದು ಗ್ರಾಮದವರೂ ವಿದ್ಯುಚ್ಛಕ್ತಿಯನ್ನು ಕೇಳಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಟ್ಟಿಯನ್ನು ಕೊಟ್ಟಿದ್ದೇವೆ. ಅದರಲ್ಲಿ ಹೆಸರುಗಳಿಲ್ಲದ ಗ್ರಾಮಗಳವರು ವಿದ್ಯುಚ್ಛಕ್ತಿಯನ್ನು ಕೇಳಿಲ್ಲವೆಂದು ಅರ್ಥವಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ಎಲ್ಲ ಪೂರ್ತಿಯಾಗಿ ತಮ್ಮಲ್ಲಿ ಮಂಜೂರಾತಿಗೆ ಬಂದು ನಿಂತಿದೆಯಂತೆ, ಹೌದೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾಗಿದ್ದರೆ ಆ ಕೆಲಸವನ್ನು ತೆಗೆದುಕೊಳ್ಳುತ್ತಿದ್ದರು. ಇಲ್ಲ ನಾವು ಕೊಟ್ಟಿರತಕ್ಕದ್ದು ಪೂರೈಸಿರತಕ್ಕವು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಧಿನಿಯಮಗಳು procedure ಇವನ್ನೆಲ್ಲ ಜನಗಳಿಗೆ ತಿಳಿಸಿದಮೇರೆ ತುಮಕೂರು ಜಿಲ್ಲೆಗೆ ಸಲ್ಲಬೇಕಾದ 'ಕೋಟ'ವನ್ನು ಬಡ್ಡಿ, ಚಕ್ರಬಡ್ಡಿ ಸಮೇತ ಈ ವರ್ಷ ಕೊಡಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜನರು ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದರೆ ನಾವು ಕೊಡುವುದಕ್ಕೆ ಸಿದ್ಧರಾಗಿದ್ದೇವೆ.

Electricity Supply to Pumpsets in Nelamangala Taluk.

Q.—504. Sri D. M. GOVINDARAJU (Nelamangala).—

Will the Government be pleased to state :—

(*a*) the villages of Bangalore District, the people of which have given applications requesting for the supply of electric power to irrigation pumps since the past three years and their names (information to be given taluk-war) ;

(*b*) the villages and the names of those to whom sanction is accorded ;

(*c*) the number of applications pending disposal, the names of the applicants, the names of their villages and with whom they are pending (information to be given talukwar) ;

(*d*) the reasons for this delay ?

A.—Sri H. M. CHANNABASAPPA (Minister for Industries).—

(*a*), (*b*) and (*c*) *Vide* list placed on the Table of the House. (Copy placed in Legislature Library *vide* No. 17—L.A. dated 4th April 1956).

(*d*) There has been no avoidable delay.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ನೆಲಮಂಗಲ ತಾಲ್ಲೂಕಿನಲ್ಲಿ ಮರಳಕುಂಟೆ, ಬುರಚನಹಳ್ಳಿ, ಆದಿಹೊನಹಳ್ಳಿ, ಓಬಳಾಪುರ ಮುಂತಾದ ಗ್ರಾಮಗಳಿಗೆ ಒಂದೇ ದಿವಸ ಅವರಿಂದ ಡಿಪಾಜಿಟ್ ಕಟ್ಟಿಸಿ ಅಂದಾಜಾಗಿ ಒಂದು ವರ್ಷವಾದರೂ ಕೂಡ ಯಾಕೆ ಇನ್ನೂ ಮಂಜೂರಾಗಿಲ್ಲ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಟೇಬಲ್ ಮೇಲೆ ಇಟ್ಟಿರತಕ್ಕ ಒಂದು ತಃಖ್ತೆ ಇದೆ. ಅದರಲ್ಲಿ ಎಲ್ಲವನ್ನೂ ನಮೂದು ಮಾಡಿದ್ದೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಅಂದಾಜಾಗಿ ಒಂದು ವರ್ಷವಾಯಿತು. ನಿಮಗೆ minimum return ಏನು work out ಆಗಬೇಕೋ ಅದು ಆಗುತ್ತದೆ. ಇಷ್ಟಾದರೂ ಈ ಕೆಲಸವನ್ನು ತೆಗೆದುಕೊಳ್ಳದೆ. ಇರಲು ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ particular case ನಾನು ನೋಡಿ ಹೇಳುತ್ತೇನೆ.

ಶ್ರೀ ಡಿ. ಎಂ. ಗೋವಿಂದರಾಜು.—ನೆಲಮಂಗಲ ತಾಲ್ಲೂಕು ಶ್ರೀಗಿರಿಪುರ—' estimate to be prepared ' ಎಂದಿದೆ (item No. 74). ಈ ಗ್ರಾಮ ನೆಲಮಂಗಲ ತಾಲ್ಲೂಕಿನಲ್ಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು typing mistake ಇರಬಹುದು.

Mr. SPEAKER.—With regard to individual instances, the Hon'ble Member can approach the Hon'ble Minister and get them verified.

Sri H. M. CHANNABASAPPA.—I have aready made a categorical statement. Wherever people come forward to take electricity, we will be very anxious to give them electricity.

ಶ್ರೀ ಡಿ. ಎಂ. ಗೋವಿಂದರಾಜು.—ಈಗ ಎಲ್ಲೆಲ್ಲಿಗೆ ಮಂಜೂರಾಗಿದೆಯೋ ಅಲ್ಲೆಲ್ಲ ಜಾಗ್ರತೆ ಕೆಲಸವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾಗಿದ್ದರೂ ಕೂಡ ಕೆಲಸವನ್ನು ಪ್ರಾರಂಭವಾಡಬೇಕಾದರೆ 100ಕ್ಕೆ 80ರಷ್ಟು ಜನ ಸರ್ವಿಸ್ ತೆಗೆದುಕೊಳ್ಳುವುದಕ್ಕೆ ಸಿದ್ಧರಾಗಿರಬೇಕು.

ಶ್ರೀ ಆರ್. ಮುನಿಸ್ವಾಮಯ್ಯ.—ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಲ್ಲೂಕು ಬಾಗಲೂರಿನಲ್ಲಿ ಮತ್ತು ಇನ್ನೊಂದು ಕಡೆ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡಲು ಹಣವನ್ನು ಡಿಪಾಜಿಟ್ ಮಾಡಿ ಸ್ಯಾಂಕ್ಷನ್ ಆಗಿ ಒಂದು ವರ್ಷವಾಗಿದ್ದರೂ ಕೂಡ ಪವರ್ ಸಪ್ಲೈ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾದರೂ ಮುಂದೆ ಸರ್ವಿಸ್ ತೆಗೆದುಕೊಳ್ಳುವುದಕ್ಕೆ ಜನರು ತಕ್ಕ ವ್ಯವಸ್ಥೆ ಮಾಡಿಲ್ಲವೆಂದು ಅರ್ಥವಾಗುತ್ತದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಎಲ್ಲವನ್ನೂ ಮಾಡಿ ಅನೇಕ ಸಲ ಅಧಿಕಾರಿಗಳನ್ನು ವಿಚಾರಿಸುತ್ತಿದ್ದರೂ ಇನ್ನೂ ಪವರ್ ಕೊಟ್ಟಿಲ್ಲ-ಇದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರ್ವಿಸ್ ತೆಗೆದುಕೊಳ್ಳಬೇಕಾದರೆ ಎಲ್ಲಾ ಸಿದ್ಧವಾಗಿರಬೇಕು, ಬಾವಿಗೆ ಪಂಪನ್ನು ಇನ್‌ಸ್ಟಾಲ್ ಮಾಡಿರಬೇಕು. ಇದೆಲ್ಲಾ ಮಾಡಿ ಶೇಕಡ 80 ಜನರಾದರೂ ಲೈನ್ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿದ್ದರೆ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಎಲ್ಲವನ್ನೂ ಮಾಡಿ ಪಂಪು ತುಕ್ಕು ಹಿಡಿದುಹೋಗುತ್ತಿದೆಯೆಂದು ಪದೇ ಪದೇ ಸರ್ಕಾರಕ್ಕೆ ಹೇಳಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಂಪನ್ನು ಇನ್‌ಸ್ಟಾಲ್ ಮಾಡಿ ಶೇಕಡ 80 ಜನ ಲೈನ್ ತೆಗೆದುಕೊಳ್ಳಲು ಸಿದ್ಧವಾಗಿದ್ದರೂ ತುಕ್ಕುಹಿಡಿಯುವುದಕ್ಕೆ ಅವಕಾಶಕೊಟ್ಟು ಕಾರ್ಯಕ್ರಮ ತೆಗೆದುಕೊಂಡಿರದಿದ್ದರೆ ಅದರ ಬಗ್ಗೆ ನೂಕ್ತ ಕ್ರಮ ಕೈಕೊಳ್ಳುತ್ತೇವೆ.

Government Industrial Concerns (bonus).

Q.—211. Sri D. VENKATESH (Gandhinagar.)—

Will the Government be pleased to state :—

the policy or principle on which they have declared the payment of bonus in Government Industrial concerns ?

A.—Sri H. M. CHANNABASAPPA (Minister for Industries).—

A copy of Government Order No. I. 5262-9—Ind. 38-54-18, dated 16th March 1955, laying down the principles to be followed in the matter, is appended.